ಸಿಸಿ ನಂಃ 187/2023
ಸಿ.ಡಬ್ಲೂ 13/
ಪಿ.ಡಬ್ಲೂ 10

**4 ನೇ  ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ  ರವರ ನ್ಯಾಯಾಲಯ**

**ಧಾರವಾಡ.**

ಸಾಕ್ಷಿದಾರರ ಹೆಸರು ಃ ಶಿವಾನಂದ
ತಂದೆಯ ಹೆಸರು ಃ ಚನ್ನಬಸಪ್ಪ ಎಲಿವಾಳ
ವಯಸ್ಸು ಃ 50 ವರ್ಷ
ಉದ್ಯೋಗ ಃ ರೈತ ಕೆಲಸ
ವಾಸ ಸ್ಥಳ ಃ ಅಮ್ಮಿನಬಾವಿ .

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **23.06.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಮೃತ ಗೂಳಪ್ಪ ನನಗೆ ಗೊತ್ತು. ಈಗ 3 ವರುಷದ ಹಿಂದೆ ರಾತ್ರಿ 9.50 ರ ಸಮಯದಲ್ಲಿ ಅಪಘಾತವಾಗಿದೆ ಎಂದು ನನಗೆ ಮಾಹಿತಿ ಬಂದಿತ್ತು. ನಾನು ಚಾಸಾ1 ಮತ್ತು 12 ರವರು ಘಟನಾ ಸ್ಥಳಕ್ಕೆ ಹೊಗಿದೆವು.  ಗೂಳಪ್ಪ ರವರು ಸ್ಥಳದಲ್ಲಿ  ಮರಣ ಹೊಂದಿದ್ದರು ಚಾಸಾ8 ಮತ್ತು 9 ರವರಿಗೆ ಗಾಯಗಳಾಗಿದ್ದವು. ಘಟನೆ  ಬಗ್ಗೆ ಚಾಸಾ8 ರವರಿಗೆ ವಿಚಾರಿಸಿದಾಗ ಆತನ ಅವರ ಚಕ್ಕಡಿಗೆ ಹಿಂದಿನಿಂದ ಬಿಳಿ ಬಣ್ಣದ ಬುಲೇರೊ ವಾಹನ ಡಿಕ್ಕಿ ಪಡಿಸಿದಸಿ ಎಂದು ಹೇಳಿದ.  ನಾವು ಹೊದಾಗ ಸ್ಥಳದಲ್ಲಿ ಬುಲೇರೊ ವಾಹನ ಹಾಗೂ ಚಾಲಕ ಇರಲಿಲ್ಲ.  ನಂತರ ನಾವು ಗಾಯಾಳುಗಳನ್ನು ಆಸ್ಪತ್ರೆಗೆ ಕಳಿಸಿರುತ್ತೇವೆ.  ನಂತರ ಮರುದಿನ

ಸಿಸಿ ನಂಃ 187/2023
ಸಿ.ಡಬ್ಲೂ 13/
ಪಿ.ಡಬ್ಲೂ 10

ಚಾಸಾ1 ರವರು ದೂರು ಕೊಡಲು ಠಾಣೆಗೆ ಹೋಗಬೇಕು ಎಂದು ಕೇಳಿದರು ನಾನು ಚಾಸಾ1 ರವರು ಹೇಳಿದ ಹಾಗೇ ದೂರನ್ನು ಬರೆದಿರುತ್ತೇನೆ. ಸಾಕ್ಷಿ ನಿಪಿ.1 ರಲ್ಲಿರುವ ಸಹಿ ಗುರುತಿಸಿದ್ದು ಅದನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿರುವ ಕೈಬರಹ ನನ್ನದೇ ಆಗಿರುತ್ತದೆ. ಘಟನೆಯಾಗಿ 8–10 ದಿನಗಳ ನಂತರ ಪೋಲಿಸರು ಠಾಣೆಗೆ ಕರೆಸಿದ್ದರು. ನಾನು ಠಾಣೆಗೆ ಹೋಗಿ ಸದರಿ ವಾಹನಗಳನ್ನು ನೋಡಿರುತ್ತೇನೆ. ಸಾಕ್ಷಿ ನಿಪಿ.8 ರಿಂದ 12 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೇ ಗುರುತಿಸಿರುತ್ತೇನೆ. ಸಾಕ್ಷಿ ಆರೋಪಿ ಪೊಟೊ ನೋಡಿ ಗುರುತಿಸಿರುತ್ತಾರೆ. ಚಾಸಾ8 ರವರು ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳಿಲ್ಲ ಅದರೆ ಅವರು ರಸ್ತೆ ಬದಿಗೆ ಹೋಗುವಾಗ ಹಿಂದಿನಿಂದ ಯದ್ವಾತದ್ವಾ ಬಂದು ಅಪಘಾತ ಪಡಿಸಿದ್ದಾರೆ ಎಂದು ಹೇಳಿರುತ್ತಾರೆ ಎನ್ನುತ್ತಾರೆ

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ಘಟನೆಯಾದ ಸಮಯದಲ್ಲಿ ನಾನು ಅಮ್ಮಿನಬಾವಿಯಲ್ಲಿ ಇದ್ದೆ. ಘಟನೆಯನ್ನು ಕಣ್ಣಾರೆ ನಾನು ನೋಡಿಲ್ಲ ಎಂದರೆ ಸರಿ. ನಾನು ಘಟನೆಯನ್ನು ಕಣ್ಣಾರೆ ನೋಡದೆ ಇರುವ ಕಾರಣ ಅಪಘಾತ ಹೇಗೆ ಆಯಿತು ಎಂದು ನನಗೆ ನಿಖರವಾಗಿ ಹೆಳಲು ಬರುವುದಿಲ್ಲ ಎಂದರೆ ಸಾಕ್ಷಿ ಚಾಸಾ8 ರವರು ಘಟನೆ ಬಗ್ಗೆ ಹೇಳಿರುತ್ತಾರೆ ಎನ್ನುತ್ತಾರೆ. ಚಾಸಾ1 ನನ್ನ ಸಂಬಂಧಿಕರು ಅಲ್ಲ ಮನೆಯ ಪಕ್ಕದವರು. ಅವರು ನಮ್ಮ ಮನೆಯ ಪಕ್ಕದವಾಗಿದ್ದ ಕಾರಣ ಅವರಿಗೆ ಸಹಾಯ

ಸಿಸಿ ನಂಃ 187/2023
ಸಿ.ಡಬ್ಲೂ 13/
ಪಿ.ಡಬ್ಲೂ 10

ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆ ದಿನ ಮೃತರು ರಸ್ತೆಯ ಬದಿಗೆ ಹೊಗುತ್ತಿದ್ದರು ಘಟನೆಯನ್ನು ನೊಡದೇ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ವಿಷಯಗಳ ವೈಯಕ್ತಿಕ ಮಾಹಿತಿ ಇಲ್ಲ ಚಾಸಾ1 ರವರು ಹೇಳಿದಂತೆ ಬರೆದಿರುತ್ತೇವೆ. ನಿಪಿ.8 ರಿಂದ 12 ರಲ್ಲಿರುವ ವಾಹನಗಳನ್ನು ಸಾಮಾನವಾಗಿ ಠಾಣೆ ಯಲ್ಲಿ ಇರುತ್ತವೆ ಎಂದರೆ ಸರಿ. ಆರೋಪಿಗೂ ಹಾಗೂ ಅಪಘಾತಕ್ಕೂ ಯಾವದೇ ಸಂಬಂದ ಇಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ.ಹಾಗೂ ಜೆಎಂಎಫ್‌ಸಿ,
ಧಾರವಾಡ.